**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರು ಕನಕಪುರ ಇವರ ನ್ಯಾಯಾಲಯದಲ್ಲಿ**

**ಸಿಸಿ ಸಂಖ್ಯೆ : 687/2021**

**ಪಿರ್ಯಾದುದಾರರು :** ರಾಜ್ಯದ ಪರ ಕನಕಪುರ ಸಂಚಾರಿ ಪೊಲೀಸ್ ಠಾಣೆ

– ವಿರುದ್ದ –

**ಆರೋಪಿತರು :** ಗುರುಸ್ವಾಮಿ

ಬಿನ್ ಆಲಗರ ಸ್ವಾಮಿ , 38 ವರ್ಷ

ಕಮ್ಮಸಂದ್ರ ಗ್ರಾಮ, ವಿನಾಯಕನಗರ

ಮುನಿಯಪ್ಪ ಕೌಪೌಂಡ್, ಬೆಂಗಳೂರು.

**ಆಪಾದನೆ**

**ಶ್ರೀಮತಿ. ಲತಾಶ್ರೀ ಬಿ.ವಿ., ಬಿ.ಎ.ಎಲ್.,ಎಲ್.ಬಿ ಒಂದನೇ ಅಪರ ನ್ಯಾಯಿಕ ದಂಡಾಧಿಕಾರಿಗಳು, ಕನಕಪುರ, ಆದ ನಾನು ನಿಮ್ಮ ಮೇಲೆ ಆಪಾದನೆ ಏನೆಂದರೆ:-**

ಮೊದಲನೇಯದಾಗಿ ದಿನಾಂಕಃ 04.03.2019 ರಂದು ರಾತ್ರಿ 9-45 ಗಂಟೆ ಸಮಯದಲ್ಲಿ ಕನಕಪುರ ಸಂಚಾರಿ ಪೋಲೀಸ್ ಠಾಣಾ ಸರಹದ್ದು ಕನಕಪುರ ಟೌನ್ ಕೆಹೆಚ್ ಬಿ ಕಾಲೋನಿ ಬಳಿಯ BWSSB ಪೈಪ್ ಲೈನ್ ಕ್ರಾಸ್ ಜಂಕ್ಷನ್ ಬಳಿಯ ಕನಕಪುರ ಸಾತನೂರು ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-03-ಬಿ-2845 ಟೆಂಪೋದ ಚಾಲಕನಾಗಿದ್ದು, ಟೆಂಪೋ ಹಿಂಭಾಗದ ಚಕ್ರ ಪಂಚರ್ ಆದ ಕಾರಣ ವಾಹನವನ್ನು ರಸ್ತೆ ಪಕ್ಕದಲ್ಲಿ ಸುರಕ್ಷಿತವಾಗಿ ನಿಲ್ಲಿಸದೇ ರಸ್ತೆಯಲ್ಲಿಯೇ ಯಾವುದೇ ಮುಂಜಾಗೃತ ಮತ್ತು ಸುರಕ್ಷತೆ ಕ್ರಮಗಳನ್ನು ಕೈಗೊಳ್ಳದೇ ಇಂಡಿಕೇಟರ್ ಗಳನ್ನು ಆನ್ ಮಾಡದೇ ವಾಹನದ ಹಿಂಭಾಗದ ಡೋರನ್ನು ಅಡ್ಡಲಾಗಿ ನಿಲ್ಲಿಸಿ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನವನ್ನು ತೋರ್ಪಡಿಸಿದ್ದು, ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ **337** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಬೇಜವಾಬ್ದಾರಿತನ ತೋರಿಸಿದ್ದರಿಂದ ಕನಕಪುರದ ಕಡೆಯಿಂದ ಚಾಸಾ-1 ಶಾಂತಕುಮಾರ್ ರವರ ಅಕ್ಕನ ಮಗ ಶಶಿಕುಮಾರ್ ಚಾಲನೆ ಮಾಡಿಕೊಂಡು ಬಂದ ಕೆಎ-04-ಕ್ಯೂ-6591 Yamaha ಮೋಟಾರ್ ಸೈಕಲ್ ಗೆ ಟೆಂಪೋ ಹಿಂಭಾಗದ ಡೋರ್ ಮತ್ತು ಬಂಪರ್ 3ಕ್ಕಿ ಹೊಡೆದ ಪರಿಣಾಮ ಅಪಘಾತವಾಗಿ, ಅಪಘಾತದಲ್ಲಿ ಶಶಿಕುಮಾರ್ ನಿಗೆ ಎದೆಯ ಬಳಿ ಮತ್ತು ಎಡಕಾಲಿಗೆ ತೀವ್ರವಾದ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟು ಹಿಂಬದಿ ಸವಾರ ಚಾಸಾ-9 ಪುರುಷೋತ್ತಮ ರವರ ಸಂಬಂಧಿ ಜೀವನ್ ರವರ ತಲೆ ಮತ್ತು ಮೈ ಕೈಗೆ ತೀವ್ರವಾದ ರಕ್ತಗಾಯವಾಗಿ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಗುಣವಾಗದೇ ದಿನಾಂಕ 10.03.2019 ರಂದು ರಾತ್ರಿ 8.30 ಗಂಟೆಯಲ್ಲಿ ಮೃತ ಪಟ್ಟಿದ್ದು. ಸದರಿ ನಿಮ್ಮ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ.

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ-1 ಇದೀಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ-

ಪ್ರಶ್ನೆ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬಯಸುವಿರಾ?

ಉತ್ತರಃ-

(ದಿನಾಂಕಃ 01.07.2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆಪಾದನೆಯನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

**ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಕನಕಪುರ**